# ಬುದ್ಧಿವಂತ ತಲೆ ಬುರುಡೆ



ಓರ್ವ ಪರಮ ಸುಂದರಿಯಾದ ಯುವತಿ ಒಂದು ರಸ್ತೆಯ ಬದಿಯ ದೊಡ್ಡದೊಂದು ಬಂಗಲೆಯಲ್ಲಿ ವಾಸವಾಗಿದ್ದಳು. ಆ ದಾರಿಯಲ್ಲಿ ಹೋಗುವ ಯುವಕರು ಅವಳನ್ನು ಮದುವೆಯಾಗುವ ಬಯಕೆಯಿಂದ ಆ ಬಂಗಲೆಗೆ ಬರುತ್ತಿದ್ದರು. ಹಾಗೆ ಅಲ್ಲಿಗೆ ಬಂದ ಪಥಿಕರ ಮುಂದೆ ಆಕೆ ನಾಲ್ಕು ರುಂಡಗಳನ್ನು ಇಟ್ಟು, "ಇವುಗಳಲ್ಲಿ ಯಾವುದು ಹೆಚ್ಚು ಬುದ್ಧಿಯುಳ್ಳದ್ದು ಎಂದು ತಿಳಿಸಿ" ಎನ್ನುತ್ತಿದ್ದಳು. ಈ ಪ್ರಶ್ನೆಗೆ ಉತ್ತರ ಗೊತ್ತಿಲ್ಲವೆಂದು ಎಲ್ಲರೂ ಸುಮ್ಮನಾಗುತ್ತಿದ್ದರು. ಆಗ ಆ ರಮಣಿ ರಾಕ್ಷಸಿಯ ರೂಪ ತಾಳಿ ಅವರನ್ನು ಕೊಂದುಹಾಕುತ್ತಿದ್ದಳು! ಒಂದು ದಿನ ಆ ಬಂಗಲೆಗೆ ಓರ್ವ ಬುದ್ಧಿವಂತ ವ್ಯಕ್ತಿ ಬಂದ. ಆತನಿಗೂ ಆ ರುಂಡಗಳನ್ನು ಮುಂದಿಟ್ಟು ಅದೇ ಪ್ರಶ್ನೆಯನ್ನು ಆ ಸುಂದರಿ ಕೇಳಿದಳು. ಆಗ ಆತ, "ಸರಿ. ಒಂದು ಉದ್ದನೆಯ ಕೋಲನ್ನು ತಾ" ಎಂದ. ಒಂದು ರುಂಡವನ್ನು ತೆಗೆದುಕೊಂಡು ಆ ಕೋಲನ್ನು ಅದರ ಕಿವಿಯಲ್ಲಿ ಚುಚ್ಚಿದ. ಅದು ಮುಂದುವರೆದು ಇನ್ನೊಂದು ಕಿವಿಯಿಂದ ಹೊರಗೆ ಬಂತು. ಆಗ ಆ ರುಂಡವನ್ನು ಬಿಸುಟು ಆತ ಹೇಳಿದ, "ಈ ವ್ಯಕ್ತಿ ಏನನ್ನು ಕೇಳುತ್ತಿದ್ದನೊ ಅದನ್ನು ಇನ್ನೊಂದು ಕಿವಿಯಿಂದ ಹೊರಗೆ ಹಾಕುತ್ತಿದ್ದ. ಇವನು ಯಾವ ಪ್ರಯೋಜನಕ್ಕೂ ಬಾರದವ." ಅದನ್ನು ಬಿಸಾಡಿ ಇನ್ನೊಂದು ರುಂಡವನ್ನು ತೆಗೆದುಕೊಂಡ. ಅದರ ಕಿವಿಯಲ್ಲಿ ಆ ಕೋಲನ್ನು ಹಾಕಿದಾಗ, ಈ ಬಾರಿ ಅದು ಬಾಯಿಂದ ಹೊರಬಂತು. ಅದನ್ನು ಬಿಸಾಡಿ ಆ ವ್ಯಕ್ತಿ ಹೇಳಿದ, "ಈ ವ್ಯಕ್ತಿ ಕೇಳಿದ್ದನ್ನು ಇರಿಸಿಕೊಳ್ಳದೆ, ರಹಸ್ಯಗಳನ್ನು ಇಟ್ಟುಕೊಳ್ಳಲಾರದೆ ಅದನ್ನು ಹೊರಗೆ ಹೇಳಿಬಿಡುತ್ತಾನೆ. ಏನನ್ನೂ ಧಾರಣೆ ಮಾಡಲಾರ. ಪ್ರಯೋಜನಕ್ಕೆ ಬಾರದವ." ಅದನ್ನೂ ಬಿಸಾಡಿ ಇನ್ನೊಂದು ರುಂಡವನ್ನು ತೆಗೆದುಕೊಂಡ. ಅದೇ ರೀತಿ ಕೋಲಿನಿಂದ ಪರೀಕ್ಷೆ ಮಾಡಿದಾಗ ಅದು ಗಂಟಲಿನ ಒಳಗೆ ಇಳಿಯಿತು—ಅಲ್ಲಿಂದ ಹೊರಗೆ ಬಂತು. ಅದನ್ನೂ ಬಿಸಾಡಿ ಆ ವ್ಯಕ್ತಿ ಹೇಳಿದ, "ಈ ವ್ಯಕ್ತಿ ಏನನ್ನು ಕೇಳುವನೊ ಅದನ್ನು ನುಂಗಿಹಾಕುವವನು. ಮನಸ್ಸಿನಲ್ಲಿ ನಿಲ್ಲುವುದಿಲ್ಲ." ನಾಲ್ಕನೆಯ ರುಂಡವನ್ನು ತೆಗೆದುಕೊಂಡು ಕೋಲನ್ನು ಕಿವಿಯಲ್ಲಿ ಚುಚ್ಚುತ್ತಿದ್ದಂತೆ ಅದು ತಲೆಯ ಭಾಗದ ತುದಿಗೆ ಹೋಗಿ ಸೇರಿತು. ಹೊರಗೆ ಬರಲೇ ಇಲ್ಲ. ಆಗ ಆತ ಹೇಳಿದ, "ಈ ಮನುಷ್ಯ ಎಲ್ಲರಿಗಿಂತಲೂ ಬುದ್ಧಿವಂತ. ಈತ ಯಾವುದನ್ನು ಕೇಳುವನೋ ಅದನ್ನು ಗ್ರಹಿಸಬಲ್ಲ." ಸರಿಯಾದ ಉತ್ತರವನ್ನು ಪಡೆದು ಆ ಮಾಯಾವಿ ರಕ್ಕಸಿ ಅದೃಶ್ಯಳಾದಳು. ಮುಂದೆ ಯಾವ ಪಥಿಕರಿಗೂ ತೊಂದರೆ ಕೊಡಲಿಲ್ಲ.



